ಒ ಎಸ್ 70/2023 ಪಿ.ಡಬ್ಲ್ಯೂ 1

ಇಂದು ದಿಃ 27.02.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಎಚ್ ಪಿ ಎಸ್ ವಕೀಲರಿಂದಃ

ದಿಃ04.04.1942 ರ ನೋಂದಾಯಿತ ಕ್ರಯಪತ್ರವನ್ನು ದಿಃ06.04.1942 ರಲ್ಲಿ ನೋಂದಣಿ ಮಾಡಿದ್ದು ಅದನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಿದ್ದು, ಸದರಿ ದಾಖಲೆಯ ದೃಢೀಕೃತ ಪ್ರತಿಯನ್ನು ನಿ ಪಿ 2(ಎ) ಎಂದು ನಿಶಾನಗೊಳಪಡಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ GNS ವಕೀಲರಿಂದಃ

ಸರ್ವೆ ನಂಬರ್ 135, 136 ರ ಚಕ್ಕುಬಂದಿ ತೋರಿಸಲು ದಾಖಲೆ ಕೊಟ್ಟಿದ್ದೇನೆ. ದಾಖಲೆಯಾಗಿ ನಮ್ಮ ಜಮೀನಿನ ಅಕ್ಕಪಕ್ಕದಲ್ಲಿರುವವರ ಬಗ್ಗೆ ದಾಖಲೆ ಕೊಟ್ಟಿದ್ದೇನೆ ಆದರೆ ದಾಖಲೆಯ ಸ್ವರೂಪ ಏನು ಎಂದು ನನಗೆ ಗೊತ್ತಿಲ್ಲ. ನನ್ನ ತಾತ 50-60 ವರ್ಷ ಸ್ವತ್ತಿನ ಅನುಭೋಗದಲ್ಲಿದ್ದರು ಎಂಬ ಬಗ್ಗೆ ದಾಖಲೆ ಕೊಟ್ಟಿದ್ದೇನಾ ಎಂದರೆ ಕ್ರಯಪತ್ರ ಬಿಟ್ಟು ಬೇರೆ ದಾಖಲೆ ಹಾಜರು ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಮುತ್ತಾತನ ಹೆಸರಿನಲ್ಲಿದ್ದ ಖಾತೆಯ ಬಗ್ಗೆ ದಾಖಲೆ ಹಾಜರು ಮಾಡಿದ್ದೇನಾ ಎಂದರೆ ಹಾಜರು ಮಾಡಿಲ್ಲ. ನನ್ನ ತಾತ ಬದುಕಿರುವವರೆಗೆ ಪಾವತಿ ಮಾಡಿದ ಕಂದಾಯ ರಶೀದಿಗಳನ್ನು ಹಾಜರು ಮಾಡಿದ್ದೇನೆ. ನನ್ನ ತಾತ ಸುಮಾರು ಕ್ರಯಕ್ಕೆ ಪಡೆದ ನಂತರ ಕಂದಾಯ ಪಾವತಿ ಮಾಡುತ್ತಿದ್ದರು. ನನ್ನ ತಾತ ಕ್ರಯಕ್ಕೆತೆಗೆದುಕೊಂಡಾಗ ಪೋಡಾಗಿರಲಿಲ್ಲ.

ಸರ್ವೆ ನಂಬರ್ 135, 136 ರ ಆಸ್ತಿಯನ್ನು ಪ್ರತ್ಯೇಕ ಪೋಡು ಮಾಡಿಸಿಲ್ಲ. ಜಮೀನು ಖರೀದಿಸಿದ ನಂತರ ನನ್ನ ತಾತ ಆಸ್ತಿಯ ಹದ್ದು ಬಸ್ತು ಮಾಡಿಸಿಕೊಂಡಿದ್ದಾರಾ ಎಂದರೆ ಮಾಡಿಸಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ವಂಶವೃಕ್ಷದಲ್ಲಿರುವ ಸದಸ್ಯರು ಇದ್ದಾರೆ ಎನ್ನುವ ಬಗ್ಗೆ ಸರ್ಕಾರಿ ದಾಖಲೆ ಕೊಟ್ಟಿಲ್ಲ. ನನ್ನ ಮುತ್ತಾತ ರಘುಪತಿ ನಾಯಕ ಯಾವಾಗ ಮೃತಪಟ್ಟರು ಎಂದು ದಾಖಲೆ ಕೊಟ್ಟಿಲ್ಲ. ನನ್ನ ತಾತ ದಾಸನಾಯಕ ಮೃತಪಟ್ಟ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನನ್ನ ತಂದೆ ತೀರಿಹೋದ ಬಗ್ಗೆ ಅವರ ಮರಣಪ್ರಮಾಣಪತ್ರ ಹಾಜರು ಮಾಡಿದ್ದೇನೆ. ನನ್ನ ತಾತನಾದ ದಾಸನಾಯಕನಿಗೆ ಆಸ್ತಿ ಬಂತು ಎಂಬ ಬಗ್ಗೆ ಪಾಲು ಪಟ್ಟಿ ಹಾಜರು ಮಾಡಿದ್ದೇನೆ. ನನ್ನ ತಾತನಾದ ದಾಸನಾಯಕನಿಗೆ ಆಸ್ತಿ 1944 ರಲ್ಲಿ ಬಂದಾಗ ಆಗ ಆಸ್ತಿಯ ಖಾತೆಯನ್ನು ನನ್ನ ತಾತ ಅವರ ಹೆಸರಿಗೆ ಮಾಡಿಸಿಕೊಂಡಿರಲಿಲ್ಲ. ನನ್ನ ತಾತ ಬದುಕಿರುವವರೆಗೆ ಕಂದಾಯ ಪಾವತಿ ಮಾಡಿದ್ದಾರೆ. ಅವರು ಕಂದಾಯ ಪಾವತಿ ಮಾಡಿದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ.

ನನ್ನ ತಾತ 1972 ರಲ್ಲಿ ಮೃತಪಟ್ಟರು ಎಂಬ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನನ್ನ ತಾತನಾದ ದಾಸನಾಯಕನವರು 1944-1978 ರವರೆಗೆ ದಾವಾ ಆಸ್ತಿಯನ್ನು ಅನುಭವಿಸುತ್ತಿದ್ದರು ಎಂಬ ಬಗ್ಗೆ ದಾಖಲೆ ಕೊಟ್ಟಿಲ್ಲ. ನನ್ನ ತಾತನಿಂದ ನನ್ನ ತಂದೆಗೆ ಆಸ್ತಿ ಯಾವ ರೀತಿ ಹೋಯಿತು ಎಂಬ ಬಗ್ಗೆ ಪಾಲು ಪಟ್ಟಿ ಹಾಜರು ಮಾಡಿದ್ದೇನೆ. ನನ್ನ ತಂದೆ ದಾಸನಾಯಕನಿಗೆ ಒಬ್ಬನೇ ಮಗನಾದ ಕಾರಣ ಪಾಲು ಪಟ್ಟಿ ಆಗಿರಲಿಲ್ಲ. ನನ್ನ ತಾತನಿಂದ ನನ್ನ ತಂದೆಗೆ ಆಸ್ತಿ ಬಂದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನನ್ನ ತಾತ ಮೃತಪಟ್ಟ ನಂತರ ನನ್ನ ತಂದೆ ಖಾತೆ ಮಾಡಿಸಿಕೊಂಡಿದ್ದಾರೆ. ಆ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ನನ್ನ ತಂದೆ ಜೀವಂತ ಇರುವವರೆಗೆ ಆಸ್ತಿಯನ್ನು ಅನುಭವಿಸುತ್ತಿದ್ದ ಬಗ್ಗೆ ದಾಖಲೆ ಹಾಜರು ಮಾಡಿದ್ದೀನಾ ಎಂದರೆ ಆರ್ ಟಿ ಸಿ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆ ಜೀವಂತ ಇರುವವರೆಗೆ ಕಂದಾಯ ಪಾವತಿ ಮಾಡಿದ ದಾಖಲೆ ಹಾಜರು ಮಾಡಿದ್ದೇನೆ. ನನ್ನ ತಂದೆ 2006 ರಲ್ಲಿ ಕಾಲವಾಗಿದ್ದು ಅವರ ನಂತರ ನನ್ನ ಹೆಸರಿಗೆ ದಾವಾ ಆಸ್ತಿಯನ್ನು ಖಾತೆ ಮಾಡಿಸಿಕೊಂಡಿಲ್ಲ. ನನ್ನ ತಂದೆ ಮೃತಪಟ್ಟ ನಂತರ ಸುಮಾರು 10 ವರ್ಷಗಳ ಕಾಲ ನಾನು ಕಂದಾಯ ಪಾವತಿ ಮಾಡಿದ್ದೇನೆ ಮತ್ತು ಆ ಬಗ್ಗೆ ದಾಖಲೆಹಾಜರು ಮಾಡಿದ್ದೇನೆ.

ಸರ್ವೆ ನಂಬರ್ 135,136 ನನ್ನ ಮುತ್ತಾತ ಮತ್ತು ತಾತ ಇದ್ದಾಗ ಪೋಡಿಯಾಗಿಲ್ಲ. ನನ್ನ ತಂದೆ ಇದ್ದಾಗ ಪೋಡಿಯಾಗಿತ್ತು. ಸರ್ವೆ ನಂಬರ್ 135 ಮತ್ತು 136 ರಲ್ಲಿ ಎಷ್ಟು ಆಸ್ತಿ ನನ್ನ ತಂದೆಗೆ ಬಂತು ಎಂಬ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ಸರ್ವೆ ನಂಬರ್ 135/2 ರಲ್ಲಿ 1 ಎಕರೆ 25 ಗುಂಟೆ, ಸರ್ವೆ ನಂಬರ್ 136 ರಲ್ಲಿ 2 ಎಕರೆ ಬಂದಿದೆ. ಆ ರೀತಿ ಆಯಿತು ಎನ್ನುವ ಬಗ್ಗೆ ದುರಸ್ಥಿ ದಾಖಲೆ ಹಾಜರು ಮಾಡಿದ್ದೇನೆ.

ನಾನು ದಾವೆಯನ್ನು ದಾಖಲು ಮಾಡುವವರೆಗೆ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದೇನೆ ಎಂಬ ಬಗ್ಗೆ ಆರ್ ಟಿ ಸಿ ಗಳನ್ನು ಹಾಜರು ಮಾಡಿದ್ದೇನೆ. ನಾನು ಹಾಜರು ಮಾಡಿದ್ದ ಆರ್ ಟಿಸಿ ಯ ಪ್ರಕ್ರಿಯೇಯ ಆರ್ ಎ 9/2017 ರ ಅರ್ಜಿಯ ರೀತ್ಯಾ ಎ ಸಿ ನ್ಯಾಯಾಲಯದಲ್ಲಿ ರದ್ದಾಗಿದೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಆ ಪ್ರಕರಣ ಇತ್ತು ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆರ್ ಎ 9/2017 ಪ್ರತಿವಾದಿಗಳಾದ 7-9 ಪಕ್ಷಗಾರರಾಗಿದ್ದರು ಎಂದರೆ ಸರಿ. ಅವರ ಪೈಕಿ 7 ನೇ ಪ್ರತಿವಾದಿ ನನ್ನ ಅಣ್ಣನ ಹೆಂಡತಿ ಮತ್ತು ಉಳಿದವರು ಅವರ ಮಕ್ಕಳು. ಈ ದಾವೆಯನ್ನು ದಾಖಲಿಸಿದ್ದ ವಕೀಲರೇ ಆ ಪ್ರಕರಣದಲ್ಲಿ ಪ್ರತಿನಿಧಿಸಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಆರ್ ಎ ಆದೇಶವನ್ನು ನಾನು ಡಿ ಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇನೆ. ಅದರ ಬಗ್ಗೆ ದಾಖಲೆಯನ್ನು ಹಾಜರು ಮಾಡಿದ್ದೇನೆ. ಎ ಸಿ ನ್ಯಾಯಾಲಯದಲ್ಲಿ ನನಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ ಎಂದು ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಿಪಿ 17 -24 ರವರೆಗಿನ ದಾಖಲೆ ಪ್ರಕಾರ ಸರ್ವೆ ನಂಬರ್ 135/1, 136/2 ರಂಗಮ್ಮನವರ ಹೆಸರಿನಲ್ಲಿದೆ ಎಂದರೆ ಸರಿ. ಸರ್ವೆ ನಂಬರ್ 136/2 ರಲ್ಲಿ 3 ಎಕರೆ 14 ಗುಂಟೆ ಜಮೀನು ಕೆ ರಂಗನಾಯಕನವರ ಹೆಸರಿನಲ್ಲಿ 1986-1996 ರವರೆಗೆ ಇದೆ ಎಂದರೆ ಸರಿ. ಈ ಆರ್ ಟಿ ಸಿ ಗಳನ್ನು ನನ್ನ ಮುತ್ತಾತ, ತಾತ, ನನ್ನ ತಂದೆ ಮತ್ತು ನಾನು ಯಾರೂ ಕೂಡಾ ಪ್ರಶ್ನಿಸಿಲ್ಲ ಎಂದರೆ ಸರಿ. ನಿ ಪಿ 28 -32 ರ ದಾಖಲೆಗಳು ಸರ್ವೆ ನಂಬರ್ 135/1 ರ 1 ಎಕರೆ 37 ಗುಂಟೆ ರಂಗಮ್ಮನ ಹೆಸರಿನಲ್ಲಿದೆ ಮತ್ತು 136/2 ರ 2 ಎಕರೆ 30 ಗುಂಟೆ ಜಮೀನು ರಾಮನಾಯಕನವರ ಹೆಸರಿನಲ್ಲಿದೆ ಎಂದರೆ ಸರಿ. ನಿ ಪಿ 33 ಮತ್ತು 34 ಸರ್ವೆ ನಂಬರ್ 135 ರಲ್ಲಿ 4 ಎ 27 ಗುಂಟೆ ದೊಡ್ಡಮಂಚನ ಹೆಸರಿನಲ್ಲಿದೆ ಮತ್ತು 136 ರಲ್ಲಿ 4 ಎಕರೆ 38 ಗುಂಟೆ ದೊಡ್ಡಮಂಚನ ಹೆಸರಿನಲ್ಲಿದೆ ಎಂದರೆ ಸರಿ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.